# ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ

## ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ

## ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ಹವಾಮಾನ ಸಲಹಾ ಸೂಚಕ

(ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಹಾಗೂ ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ, ಬ್ರಹ್ಮಾವರ-576213, ಉಡುಪಿ ಜಿಲ್ಲೆ ಕರ್ನಾಟಕ ಇವರ ಜಂಟಿ ಪ್ರಸಾರ)

**ಹವಾಮಾನ ಮುನ್ಸೂಚನೆಯ ಅವಧಿ 12.09.2025 ರಿಂದ 16.09.2026**

ಸಂ. ಗ್ರಾ.ಕೃ.ಹ.ಸೇ.ಬ/69/2026 ದಿನಾಂಕ: 11.09.2026

**ಕಳೆದ ವಾರದ ಪರಿಸ್ಥಿತಿ (ದಿನಾಂಕ: 07.09.2026 ರಿಂದ 11.09.2026 ರವರೆಗೆ)**

| ಹವಾಮಾನದ ಅಂಶಗಳು | ದಿನ-1 (07.09.2026) | ದಿನ-2 (08.09.2026) | ದಿನ-3 (09.09.2026) | ದಿನ-4 (10.09.2026) | ದಿನ-5 (11.09.2026) |
|---|---|---|---|---|---|
| ಮಳೆ (ಮಿ.ಮೀ.) | 0 | 0 | 21.7 | 0 | 0 |
| ಗರಿಷ್ಠ ಉಷ್ಣಾಂಶ (ಡಿ.ಸೆ.) | 32 | 32 | 31.1 | 30.8 | 32 |
| ಕನಿಷ್ಠ ಉಷ್ಣಾಂಶ (ಡಿ.ಸೆ.) | 24.5 | 26.3 | 24.1 | 26.3 | 25.2 |
| ಸ್ಥಳೀಯ ಮೋಡಗಳ ಹೊದಿಕ (ಒಕ್ಟಾ) | 5 | 4 | 4 | 4 | 4 |
| ಗರಿಷ್ಠ ಆರ್ದ್ರತೆ (ಶೇ.) | 86 | 86 | 87 | 90 | 84 |
| ಕನಿಷ್ಠ ಆರ್ದ್ರತೆ (ಶೇ.) | 73 | 71 | 74 | 79 | 73 |
| ಗಾಳಿಯ ವೇಗ (ಕಿ.ಮೀ./ಗಂಟೆಗೆ) | 6 | 0 | 6 | 6 | 8 |

ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು, ಇವರು ದಕ್ಷಿಣ ಕನ್ನಡ ಜಿಲ್ಲೆಗೆ ಮುಂದಿನ ಐದು ದಿನಗಳು ದಿನಾಂಕ 12.09.2026 ರಿಂದ 16.09.2026 ರ ವರೆಗೆ ಲಭ್ಯವಿರುವ ಹವಾಮಾನ ಮುನ್ಸೂಚನೆ ಈ ಕೆಳಕಂಡಂತೆ ನೀಡಿರುತ್ತಾರೆ

| ಹವಾಮಾನದ ಅಂಶಗಳು | ಕ್ರೋಢೀಕರಿಸಿದ ಹವಾಮಾನ ಮುನ್ಸೂಚನೆ | | | | |
|---|---|---|---|---|---|
| | ದಿನ-1 (12.09.2026) | ದಿನ-2 (13.09.2026) | ದಿನ-3 (14.09.2026) | ದಿನ-4 (15.09.2026) | ದಿನ-5 (16.09.2026) |
| ಮಳೆ ಪ್ರಮಾಣ (ಮಿ.ಮೀ.) | 0 | 1 | 1 | 2 | 2 |
| ಗರಿಷ್ಠ ಉಷ್ಣಾಂಶ (°C) | 32 | 32 | 33 | 32 | 32 |
| ಕನಿಷ್ಠ ಉಷ್ಣಾಂಶ (°C) | 25 | 25 | 26 | 25 | 26 |
| ಮೋಡದ ಹೊದಿಕೆ (ಒಕ್ಟಾ) | 5 | 6 | 6 | 3 | 3 |
| ಗರಿಷ್ಠ ಆರ್ದ್ರತೆ (ಶೇ.) | 82 | 81 | 80 | 82 | 80 |
| ಕನಿಷ್ಠ ಆರ್ದ್ರತೆ (ಶೇ.) | 70 | 71 | 72 | 71 | 70 |
| ಗಾಳಿಯ ವೇಗ (Kmph) | 4 | 6 | 4 | 6 | 4 |
| ಗಾಳಿಯ ದಿಕ್ಕು (°) | 18 | 18 | 360 | 360 | 360 |

ಭಾರತ ಹವಾಮಾನ ಇಲಾಖೆ, ನವದೆಹಲಿ ಮತ್ತು ರಾಜ್ಯ ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ವಿಸ್ತೃತ ಮಳೆ ಮುನ್ಸೂಚನೆಯ ಪ್ರಕಾರ ಕರ್ನಾಟಕದ ಕರಾವಳಿ ತೀರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ದಿನಾಂಕ 17.09.2026 ರಿಂದ 23.09.2026 ರವರೆಗೆ ವಾಡಿಕೆಗಿಂತ ಕಡಿಮೆ ಮಳೆಯಾಗುವ ಸಂಭವವಿದೆ.

### ಹವಾಮಾನ ಪರಿಸ್ಥಿತಿ ಮತ್ತು ಮುನ್ಸೂಚನೆ ಸಾರಾಂಶ

ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಇವರು, ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಮುನ್ಸೂಚನೆಯ ಪ್ರಕಾರ, **ಮುಂದಿನ ಐದು ದಿನಗಳಲ್ಲಿ ಹಲವೆಡೆ ಒಣಹವೆಯಿಂದ ಮಳೆಯಿಂದ ತುಂತುರು ಮಳೆಯಾಗುವ ಸಂಭವವಿದೆ.** ಮುಂದಿನ ಐದು ದಿನಗಳಲ್ಲಿ ಗರಿಷ್ಠ ತಾಪಮಾನವು **32.0 °C - 33.0°C** ಇರುತ್ತದೆ ಮತ್ತು ಕನಿಷ್ಠ ತಾಪಮಾನವು **25.0 °C -26.0°C** ಇರುತ್ತದೆ. ಸರಾಸರಿ ಸಾಪೇಕ್ಷ ಆದ್ರತೆಯು ಬೆಳಗಿನ ಸಮಯದಲ್ಲಿ **80%** ರಿಂದ **82%** ರಷು ಇರುತ್ತದೆ. ಹಾಗೂ ಮಧ್ಯಾಹ್ನದ ಸಮಯದಲ್ಲಿ **70%** ರಿಂದ **72%** ರಷ್ಟು ಇರುತ್ತದೆ. ಸರಾಸರಿ ಗಾಳಿಯ ವೇಗವು **04-06** ಕೀ.ಮೀ. ಪ್ರತಿ ಘ,ವೇಗದಲ್ಲಿ ಬೀಸಲಿದೆ. ಈ ಹವಾಮಾನ ಪರಿಸ್ಥಿತಿಯನ್ನು ಪರಿಗಣಿಸಿದರೆ, ರೈತರು ಈ ಕೆಳಕಂಡ ಕೃಷಿ ಸಲಹೆಗಳನ್ನು ಅನುಸರಿಸುವಂತೆ ಸಲಹೆ ನೀಡಲಾಗಿದೆ.

**Mobile Applications developed by India Meteorological Department for the benefit of Farming Community Farmers are suggested to download the app using below links**

| | Mausam: | Meghdoot: | Damini: |
|---|---|---|---|
| Andriod: | https://play.google.com/store/apps/details?id=com.imd.masuam | https://play.google.com/store/apps/details?id=com.aas.meghdoot | https://play.google.com/store/apps/details?id=com.lightening.live.damini |
| Apple OS: | https://apps.apple.com/us/app/id1522893967 | https://apps.apple.com/in/app/meghdoot/id1474048155 | https://apps.apple.com/app/id1502385645 |

**Decadal Rainfall (mm) Comparison:**

| Year | 30 years Mean | 2014 | 2015 | 2016 | 2017 | 2018 | 2019 | 2020 | 2021 | 2022 | 2023 | 2024 | 2025 |
|---|---|---|---|---|---|---|---|---|---|---|---|---|---|
| Rainfall | 3783.8 | 2816.3 | 2383.4 | 2827.1 | 3000 | 3381.2 | 4118.4 | 4110.8 | 4110.8 | 3879.9 | 3456.2 | 4511.1 | 5425.0 |
| Rainy days | 108 | 112 | 107 | 119 | 121 | 112 | 123 | 126 | 152 | 125 | 110 | 137 | 142 |

| Realized Rainfall (27th August to 09th September,2026) | | Extended Range Forecast System Rainfall forecast maps for the next 2 weeks (IC - 09th September, 2026) (11th to 24th September, 2026) | |
|---|---|---|---|
|  |  |  |  |

| Warnings for Costal Karnataka | |
|---|---|
| Date of Issue: September 4, 2026 | |
| Day 1:September 11, 2026 | No warning |
| Day 2: September 12, 2026 | No warning |
| Day 3: September 13, 2026 | No warning |
| Day 4: September 14, 2026 | No warning |
| Day 5: September 15, 2026 | No warning |
| Day 6: September 16, 2026 | No warning |
| Day 7: September 17, 2026 | No warning |

## ಸಾಮಾನ್ಯ ಸಲಹೆ:

| |
|---|
| ಕಳೆದ ಒಂದು ವಾರದಿಂದ ಮಳೆಯಾಗದಿರುವ್ವದರಿಂದ ರೈತರು ಬೆಳೆಗಳಲ್ಲಿ ಹೊದಿಕೆ ಮಾಡುವುದು ಸೂಕ್ತವಾಗಿದೆ |
| ರೈತರು ಭತ್ತದ ಬೆಳೆಗೆ 2ನೇ ಹಂತದ ಮೇಲುಗೊಬ್ಬರವನ್ನು ನೀಡುವುದು ಸೂಕ್ತ |
| ರೈತರು ಅಡಿಕೆಗೆ 2ನೇ ಸುತ್ತಿನ ಬೋರ್ಡೋ ದ್ರಾವಣವನ್ನು ಬಿಡುವಿನ ವಾತಾವರಣದಲ್ಲಿ ಸಿಂಪಡಿಸಬಹುದು |
| ರೈತರು ಮಣ್ಣು ಪರೀಕ್ಷೆಯ ಆದಾರದ ಮೇಲೆ ಕೃಷಿ ಸುಣ್ಣವನ್ನು ಬಳಸುವುದು. |

## ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಹವಾಮಾನ ಮುನ್ಸೂಚನೆ ಆಧಾರಿಸಿ ನೀಡಿದ ಕೃಷಿ ಸಲಹೆಗಳು

| ಬೆಳೆ/ಉಪಕಸುಬು | ಬೆಳೆಯ ಹಂತ | ಹವಾಮಾನ ಅಪಾಯ | ಬೆಳೆ ಸಲಹೆ |
|---|---|---|---|
| ಭತ್ತ | ತೆನೆ ಹೊರಡುವ ಹಂತ | ಮಧ್ಯ ಮತ್ತು ಬೆಟ್ಟು ಗದ್ದೆಗಳಲ್ಲಿ ನೀರಿನ ಕೊರತೆ | • ಮುಖ್ಯ ಗದ್ದೆಯ ಬದುಗಳನ್ನು ಗಟ್ಟಿಗೊಳಿಸುವ ಮೂಲಕ ನೀರನ್ನು ಸಂರಕ್ಷಿಸುವುದು ಮತ್ತು ನೀರಿನ ಸೋರುವಿಕೆಯನ್ನು ಕಡಿಮೆ ಮಾಡುವುದು. ಬೆಳೆಯ ಈ ನಿರ್ಣಾಯಕ ಹಂತಗಳಲ್ಲಿ ನೀರನ್ನು ನೀಡುವುದು ಉತ್ತಮ ಇದರಿಂದ ಬೆಳೆಯ ಇಳುವರಿ ಹೆಚ್ಚಾಗುತ್ತದೆ. |
| | | • ಕೊಳವೆ ಹುಳು ಮತ್ತು ಎಲೆ ಸುರುಳಿ ಹುಳುವಿನ ಭಾಧೆ ಸಾಧ್ಯತೆ | • ಗದ್ದೆಯ ಬದುಗಳನ್ನು ಸ್ವಚ್ಛವಾಗಿಡುವುದು ಸೂಕ್ತ<br>• ಕೊಳವೆ ಹುಳುವಿನ ಭಾಧೆ ಕಂಡುಬಂದಲ್ಲಿ ಕ್ಲೋರಾನ್‌ಟ್ರನೋಫ್ರೋಲ್ 0.5 ಮಿ.ಲೀ/ನೀರಿಗೆ ಅಥವಾ ಕ್ಲೋರೋಫೈರಿಫಾಸ್ 2.0 ಮಿ.ಲೀ/ನೀರಿಗೆ ಅಥವಾ ಬೇವಿನ ಎಣ್ಣೆ 3.0 ಮಿ.ಲೀ/ನೀರಿಗೆ ಬೆರಸಿ ಸಿಂಪಡಿಸುವುದು ಉತ್ತಮ<br>• ಎಲೆ ಸುರುಳಿ ಹುಳುವಿನ ಭಾಧೆ ಕಂಡುಬಂದಲ್ಲಿ ಕ್ಲೋರಾನ್‌ಟ್ರನೋಫ್ರೋಲ್ 0.5 ಮಿ.ಲೀ/ನೀರಿಗೆ ಅಥವಾ ಕ್ಲೋರೋಫೈರಿಫಾಸ್ 2.0 ಮಿ.ಲೀ/ನೀರಿಗೆ ಅಥವಾ ಬೇವಿನ ಎಣ್ಣೆ 3.0 ಮಿ.ಲೀ/ನೀರಿಗೆ ಬೆರಸಿ ಸಿಂಪಡಿಸುವುದು ಉತ್ತಮ |
| | | • ಸಾಮಾನ್ಯ ಸಲಹೆ: ನಾಟಿ ಮಾಡಿದ 50-55 ದಿನಗಳ ನಂತರ 2ನೆ ಹಂತದ ಮೇಲುಗೊಬ್ಬರ ನೀಡುವುದು ಸೂಕ್ತ. ಈ ಕೆಳಗಿನ ರಸಗೊಬ್ಬರಗಳ ಸಂಯೋಜನೆಯಲ್ಲಿ ಯಾವುದಾದರೂ ಒಂದು ಸಂಯೋಜನೆಯನ್ನು/ಆಯ್ಕೆಯನ್ನು ಬಳಸಬೇಕು | |

**ತೋಟಗಾರಿಕೆ ಬೆಳೆಗಳು**

| | | | |
|---|---|---|---|
| ಅಡಿಕೆ | ಕಾಯಿ ಆಗುವ ಹಂತ | ನರ್ಸರಿ | ಕಳೆ ನಿರ್ವಹಣೆ ಮತ್ತು ರೋಗಗಳ ಬಗ್ಗೆ ಮುನ್ನೆಚ್ಚರಿಕೆ ವಹಿಸುವುದು ಉತ್ತಮ. ಮಳೆಯ ಆದಾರದ ಮೇಲೆ ನೀರು ನೀಡುವುದು |
| | | ಹೊಸದಾಗಿ ಗಿಡ ನೆಡುವುದು | ರೈತರು 9 ಅಡಿ X 9 ಅಡಿ ಅಂತರದಲ್ಲಿ ಗಿಡ ನೆಡುವುದು ಉತ್ತಮ. ಗಿಡ ನೆಡುವ ಮೊದಲು ನೀರಿನ ವ್ಯವಸ್ಥೆಯನ್ನು ಮಾಡಿಕೊಳ್ಳುವುದು. ಅನಂತರ ಅಂತರ ಬೆಳೆಯಾಫಿ ಬಾಳೆಯನ್ನು ಬೆಳೆಯಬಹುದು ಇದರಿಂದ ಅಡಿಕೆ ಸಸಿಗಳಿಗೆ ನೆರಳು ಸಿಗುವುದರ ಜೊತೆಗೆ ರೈತರ ಆದಾಯವು ಕೂಡ ಹೆಚ್ಚಾಗುತ್ತದೆ. |
| | | ಸುಳಿ ತಿಗಣೆ ಮತ್ತು | ರೈತರು ಈ 02 ಹುಳುಗಳ ಭಾಧೆ ಕಂಡುಬಂದರೆ ಇಮಿಡಾಕ್ಲೋಪ್ರಿಡ್ 1.0 ಮಿ.ಲೀ/ನೀರಿಗೆ |

| | | | |
|---|---|---|---|
| | | ಪೆಂಟಟೋಮಿಡ್ ತಿಗಣೆಯ ಭಾಧೆ ಸಾಧ್ಯತೆ | ಅಥವಾ ಥಯೋಮೆಥಾಕ್ಸಾಮ್ ಅನ್ನು 0.5ಗ್ರಾಂ/ನೀರಿಗೆ ಬರಸಿ ಸಿಂಪಡಿಸುವುದು ಸೂಕ್ತವಾಗಿದೆ |
| | | ಬೇರು ಹುಳು ಭಾಧಿಸುವ ಸಾಧ್ಯತೆ | ಬೇರು ಹುಳು ಭಾಧಿಸುವ ಸಾಧ್ಯತೆಯಿರುವುದರಿಂದ ರೈತರು ಕ್ಲೋರೋಫೈರಿಫಾಸ್ 3.0 – 5.0 ಮಿ.ಲೀ/ನೀರಿಗೆ ಬೆರಸಿ ಒಂದು ಗಿಡದ ಬುಡಕ್ಕೆ ಕನಿಷ್ಠ 5ಲೀಟರ್ ನಷ್ಟು ಹಾಕುವುದು |
| | | ಪೋಷಕಾಂಶ ನಿರ್ವಹಣೆ | ಕರಾವಳಿ ಭಾಗದ ರೈತರು ಮಣ್ಣು ಪರೀಕ್ಷೆ ಆಧಾರದ ಮೇಲೆ ಕೃಷಿ ಸುಣ್ಣವನ್ನು ಹಾಕಬೇಕು, ಮಣ್ಣಿನಲ್ಲಿ ತೇವಾಂಶವಿರುವಾಗ ಕೃಷಿ ಸುಣ್ಣವನ್ನು ಹಾಕಬೇಕು. ಕೃಷಿ ಸುಣ್ಣವನ್ನು ಹಾಕಿದ 15 ದಿನಗಳ ನಂತರ ಶಿಫಾರಸ್ಸಿನ ಪ್ರಮಾಣದ ರಾಸಾಯನಿಕ ಗೊಬ್ಬರವನ್ನು ಬಳಸಬೇಕು. (ಯೂರಿಯಾ: 108 ಗ್ರಾಂ, ಸಿಂಗಲ್ ಸೂಪರ್ ಫಾಸ್ಫೇಟ್: 125 ಗ್ರಾಂ ಮತ್ತು ಮ್ಯುರೇಟ್ ಆಫ ಪೊಟ್ಯಾಷ್: 116ಗ್ರಾಂ + 20 ಕಿ.ಜಿ ಕೊಟ್ಟಗೆ ಗೊಬ್ಬರ/ ಎರೆಹುಳು ಗೊಬ್ಬರ/ ಕಾಂಪೋಸ್ಟ್) |
| ತೆಂಗು | ಕಾಯಿ ಪ್ರಬುದ್ಧತೆಯ ಹಂತ | ಹೊಸದಾಗಿ ಗಿಡ ನೆಡುವುದು | ರೈತರು 40 ಅಡಿ X 40 ಅಡಿ ಅಂತರದಲ್ಲಿ ಗಿಡ ನೆಡುವುದು ಉತ್ತಮ. ಗಿಡ ನೆಡುವ ಮೊದಲು ನೀರಿನ ವ್ಯವಸ್ಥೆಯನ್ನು ಮಾಡಿಕೊಳ್ಳುವುದು. ಅನಂತರ ಅಂತರ ಬೆಳೆಯಾಗಿ ಬಾಳೆ ಅಥವಾ ತರಕಾರಿ ಯನ್ನು ಬೆಳೆಯಬಹುದು ಇದರಿಂದ ತೆಂಗು ಸಸಿಗಳಿಗೆ ನೆರಳು ಸಿಗುವುದರ ಜೊತೆಗೆ ರೈತರ ಆದಾಯವು ಕೂಡ ಹೆಚ್ಚಾಗುತ್ತದೆ. |
| | | ರೈನೋಸೊರೆಸ್ ದುಂಬಿ ಭಾಧಿಸುವ ಸಾಧ್ಯತೆ | ➢ ಹೊಂಡದಿಂದ ಗೊಬ್ಬರವನ್ನು ಎತ್ತಿದಾಗಲೆಲ್ಲಾ ಗೊಬ್ಬರದ ಹೊಂಡಗಳಿಂದ (ಕೀಟಗಳು ಸಂತಾನೋತ್ಪತ್ತಿ ಮಾಡುವ ಸ್ಥಳ) ಜೀರುಂಡೆಯ ವಿವಿಧ ಹಂತಗಳನ್ನು ಸಂಗ್ರಹಿಸಿ ನಾಶಮಾಡಿ<br>➢ ಕೀಟಗಳ ಶಾಶ್ವತೆಯನ್ನು ಪರೀಕ್ಷಿಸಲು ಗೊಬ್ಬರದ ಹೊಂಡಗಳಲ್ಲಿ ಎಂಟೋಮೊಪಾಥೋಜೆನ್ ಅಂದರೆ ಶಿಲೀಂಧ್ರವನ್ನು (ಮೆಟಾರ್ಜಿಯಂ ಅನಿಸೊಪ್ಲಿಯಾ) ಸೇರಿಸುವುದು.<br>➢ ಪ್ರತಿ ಕಟಾವಿನಲ್ಲಿ ಮರದ ಸುಳಿಗಳನ್ನು ಪರೀಕ್ಷಿಸಿ ಮತ್ತು ದೊಡ್ಡ ಜೀರುಂಡೆಗಳನ್ನು ಹೊರತೆಗೆದು ಕೊಲ್ಲುವುದು.<br>➢ ಸುಳಿಯಲ್ಲಿರುವ ಎಲೆಗಳಲ್ಲಿ ಒಳಗಿನ ಮೂರು ಎಲೆಗಳ ತಳದಲ್ಲಿ ಪೋರೇಟ್ 10ಉ+ಮರಳು (1:2) ಪ್ರತಿ ಮರಕ್ಕೆ 150 ಗ್ರಾಂ ನಂತೆ ಸೇರಿಸುವುದು.<br>➢ ರಂಧ್ರಗಳಲ್ಲಿರುವ ಸಣ್ಣ ಚೀಲಗಳಲ್ಲಿ ಪೋರೇಟ್ 10ಉ. 5 ಗ್ರಾಂ ನ್ನು ಹಾಕಿ ಎರಡು ಒಳಗಿನ ಎಲೆಯ ಅಕ್ಷಗಳಲ್ಲಿ 6 ತಿಂಗಳ ಮಧ್ಯಂತರದಲ್ಲಿ 2 ಬಾರಿ ಇರಿಸುವುದು<br>➢ ಜೀರುಂಡೆಗಳನ್ನು ಬಲೆಗೆ ಬೀಳಿಸಲು ಮತ್ತು ಕೊಲ್ಲಲು ರೈನೋಲ್ಯೂರ್ ಫೆರೋಮೋನ್ ಬಲೆಯನ್ನು ಅರ್ಧ ಹೇಕ್ಟರ್‌ಗೆ ಅಳವಡಿಸುವುದು. |
| | | ಪೋಷಕಾಂಶ ನಿರ್ವಹಣೆ | ಕರಾವಳಿ ಭಾಗದ ರೈತರು ಮಣ್ಣು ಪರೀಕ್ಷೆ ಆಧಾರದ ಮೇಲೆ ಕೃಷಿ ಸುಣ್ಣವನ್ನು ಹಾಕಬೇಕು, ಮಣ್ಣಿನಲ್ಲಿ ತೇವಾಂಶವಿರುವಾಗ ಕೃಷಿ ಸುಣ್ಣವನ್ನು ಹಾಕಬೇಕು. ಕೃಷಿ ಸುಣ್ಣವನ್ನು ಹಾಕಿದ 15 ದಿನಗಳ ನಂತರ ಶಿಫಾರಸ್ಸಿನ ಪ್ರಮಾಣದ ರಾಸಾಯನಿಕ ಗೊಬ್ಬರವನ್ನು ಬಳಸಬೇಕು. (ಯೂರಿಯಾ: 550 ಗ್ರಾಂ, ಸಿಂಗಲ್ ಸೂಪರ್ ಫಾಸ್ಫೇಟ್: 1000 ಗ್ರಾಂ ಮತ್ತು ಮ್ಯುರೇಟ್ ಆಫ ಪೊಟ್ಯಾಷ್: 1000ಗ್ರಾಂ + 50 ಕಿ.ಜಿ ಕೊಟ್ಟಗೆ ಗೊಬ್ಬರ/ ಎರೆಹುಳು ಗೊಬ್ಬರ/ ಕಾಂಪೋಸ್ಟ್) |
| ಕಾಳು ಮೆಣಸು | ಕಾಳುಕಟ್ಟುವ ಹಂತ | ಹೊಸದಾಗಿ ಬಳ್ಳಿ ಹಬ್ಬಿಸುವಿಕೆ | ಹೊಸದಾಗಿ ಬಳ್ಳಿ ಹಬ್ಬಿಸಲು ಅಥವಾ ಬಳ್ಳಿಗಳು ಹೋಗಿರುವ ಜಾಗದಲ್ಲಿ ಹೊಸಬಳ್ಳಿಗಳನ್ನು ಮರುನಾಟಿ ಮಾಡುವುದು |
| | | ಸಾಮಾನ್ಯ ಸಲಹೆ | ಕಳೆ ನಿರ್ವಹಣೆ ಮಾಡುವುದು. ಬಳ್ಳಿಗಳ ಕವಲುಗಳನ್ನು ಕಟ್ಟುವುದು ಮತ್ತು ಆದಾಋದ ಮರಗಳ ಕೊಂಬೆಯನ್ನು ಸವರುವುದು. |
| | | ಪೋಷಕಾಂಶ ನಿರ್ವಹಣೆ | ಕರಾವಳಿ ಭಾಗದ ರೈತರು ಮಣ್ಣು ಪರೀಕ್ಷೆ ಆಧಾರದ ಮೇಲೆ ಕೃಷಿ ಸುಣ್ಣವನ್ನು ಹಾಕಬೇಕು, ಮಣ್ಣಿನಲ್ಲಿ ತೇವಾಂಶವಿರುವಾಗ ಕೃಷಿ ಸುಣ್ಣವನ್ನು ಹಾಕಬೇಕು. ಕೃಷಿ ಸುಣ್ಣವನ್ನು ಹಾಕಿದ 15 ದಿನಗಳ ನಂತರ ಶಿಫಾರಸ್ಸಿನ ಪ್ರಮಾಣದ ರಾಸಾಯನಿಕ ಗೊಬ್ಬರವನ್ನು ಬಳಸಬೇಕು. (ಯೂರಿಯಾ: 50 ಗ್ರಾಂ, ಸಿಂಗಲ್ ಸೂಪರ್ ಫಾಸ್ಫೇಟ್: 150 ಗ್ರಾಂ ಮತ್ತು ಮ್ಯುರೇಟ್ ಆಫ ಪೊಟ್ಯಾಷ್: 125ಗ್ರಾಂ + 10 ಕಿ.ಜಿ ಕೊಟ್ಟಗೆ ಗೊಬ್ಬರ/ ಎರೆಹುಳು ಗೊಬ್ಬರ/ ಕಾಂಪೋಸ್ಟ್) |
| | | ಶೀಘ್ರ ಸೊರಗು ರೋಗ | ಮುನ್ನೆಚ್ಚರಿಕೆ ಕ್ರಮವಾಗಿ ತೀವ್ರವಾಗಿ ರೋಗಭಾಧಿತ ಎಲೆಗಳನ್ನು ಕತ್ತರಿಸಿ ನಾಶಪಡಿಸಬೇಕು. ನಂತರ ಬೇವಿನ ಹಿಂಡಿಯಿಂದ ಅಥವಾ ಟ್ರೈಕೋಡರ್ಮಾದಿಂದ ಸಮೃದ್ಧಗೊಳಿಸಿದ ಕೊಟ್ಟಿಗೆ ಗೊಬ್ಬರ (ಈಜಬ) ವನ್ನು ಗಿಡದ ಬುಡಕ್ಕೆ ಹಾಕಬೇಕು ಅಥವಾ ಪ್ರತಿ ಲೀಟರ್ ನೀರಿಗೆ 3 ಗ್ರಾಂ ಕಾಪರ್ ಆಕ್ಸಿ ಕ್ಲೋರೈಡ್ ಅಥವಾ 1% ಬೋರ್ಡೋ ಮಿಶ್ರಣವನ್ನು ಬುಡಕ್ಕೆ ಹಾಕಬೇಕು |
| ಗೇರು | ಬೆಳವಣಿಗೆಯ ಹಂತ | ಟೀ ಸೊಳ್ಳೆ ಬಾಧಿಸುವ ನಿರೀಕ್ಷೆ | ಟೀ ಸೊಳ್ಳೆ ನಿರ್ವಹಣೆ ಮಾಡಲು ರೈತರು ಮೊನೊಕ್ರೊಟೋಫಾಸ್ 1.7ಮಿ.ಲೀ/ಲೀ ಅಥವಾ ಲ್ಯಾಮ್ಡಸಹ್ಯಾಲೋಥ್ರಿನ್ 0.5ಮಿ.ಲೀ/ಲೀ ಬೆರಸಿ ಸಿಂಪಡಿಸುವುದು. |
| | | ಕಾಂಡ ಕೊರಕ ಭಾಧಿಸುವ ನಿರೀಕ್ಷೆ | ರೈತರು ಕಾಂಡ ಕೊರಕ ನಿರ್ವಹಣೆ ಮಾಡಲು ಮೊದಲು ಕಾಂಡ ಕೊರಕ ಭಾಧಿತ ರಂಧ್ರವನ್ನು ಶುಚಿಗೊಳಿಸಿ ತಂತಿಯ ಸಹಾಯದಿಂದ ಕಾಂಡ ಕೊರಕವನ್ನು ಹೊರತೆಗೆದು ನಾಶಪಡಿಸಬೇಕು. ತದ ನಂತರ ಕ್ಲೋರೋಫೈರಿಫಾಸ್ ಹರಳನ್ನು ಮರಳಿನ ಜೊತೆಗೆ 1:1 ಅನುಪಾತದಲ್ಲಿ ಮಿಶ್ರಿಸಿ ರಂಧ್ರಕ್ಕೆ ಸುರಿಯುವುದು ಅಥವಾ ಬೋರ್ಡೋ ಪೇಸ್ಟ್ ಅನ್ನು ತಯಾರಿಸಿ ಅದಕ್ಕೆ ಪ್ರತಿ ಕೆ.ಜಿ.ಗೆ 5ಮಿ.ಲೀ ಕ್ಲೋರೋಫೈರಿಫಾಸ್ ಅನ್ನು ಮಿಶ್ರಿಸಿ ಭಾಧಿಸಿದ ರಂಧ್ರಕ್ಕೆ ಹಚ್ಚುವುದು |
| | | ಪೋಷಕಾಂಶ ನಿರ್ವಹಣೆ | ರೈತರು ಶಿಫಾರಸ್ಸಿನ ಪ್ರಮಾಣದ ಗೊಬ್ಬರ ನೀಡುವ 15 ದಿನಗಳ ಮೊದಲು ಪ್ರತಿ ಎಕರೆಗೆ 200 ಕಿ.ಗ್ರಾಂ ಕೃಷಿ ಸುಣ್ಣವನ್ನು ಹಾಕುವುದು ಸೂಕ್ತ<br>ರೈತರು 60:60:60 ಗ್ರಾಂ, 125:125:125 ಗ್ರಾಂ, 250:125:125 ಗ್ರಾಂ, 500:125:125 ಗ್ರಾಂ ಹಾಗೂ 500:250:250 ಗ್ರಾಂ ನಷ್ಟು ಸಾರಜನಕ/ರಂಜಕ/ಪೊಟ್ಯಾಷ್ ಅನ್ನು 1ನೇ |

| | | | |
|---|---|---|---|
| | | | ವರ್ಷದ, 2ನೇ ವರ್ಷದ,3ನೇ ವರ್ಷದ,4 ರಿಂದ 8ನೇ ವರ್ಷದ ಮತ್ತು 9ನೇ ವರ್ಷದ ಮೇಲ್ಪಟ್ಟ ಗಿಡಗಳಿಗೆ ಹಾಕುವುದು ಸೂಕ್ತವಾಗಿದೆ. |
| ಮಲ್ಲಿಗೆ | ಹೂಬಿಡುವ ಹಂತ | ಎಲೆ ಚುಕ್ಕೆ ರೋಗ | ಈ ರೋಗವನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲು 1ಮಿ.ಲೀ ಹೆಕ್ಸಾಕೊನಾಜೋಲ್ ಅನ್ನು ಪ್ರತಿ ಲೀಟರ್ ನೀರಿಗೆ ಮಿಶ್ರಣ ಮಾಡಿ ಸಿಂಪಡಿಸುವುದು |
| | | ಸಾಮಾನ್ಯ ಸಲಹೆ | ಮುಂಗಾರು ಆರಂಭವಾಗುತ್ತಿರುವ ಹಿನ್ನಲೆಯಲ್ಲಿ ರೈತರು ತಮ್ಮ ಜಮೀನಿನಲ್ಲಿ ಬಸಿಗಾಲುವೆ ವ್ಯವಸ್ಥೆಯನ್ನು ಕಲ್ಪಿಸುವುದು ಸೂಕ್ತವಾಗಿದೆ. |
| ಹಸು | ------ | ಅಧಿಕ ತೇವಾಂಶ | ಸತತವಾಗಿ ಮಳೆಯಾಗುತ್ತಿರುವುದರಿಂದ ಹಸುಗಳಿಗೆ ಉಸಿರಾಟದ ಸಂಬಂಧಿತ ಕಾಯಿಲೆಗಳು ಸಂಭವಿಸಬಹುದು ಇದರಿಂದ ಕೊಟ್ಟಿಗೆಯನ್ನು ಒಣಗಿದ ಸ್ಥಿತಿಯಲ್ಲಿ ಇಡುವುದು ಉತ್ತಮ |
| | | ಸಾಮಾನ್ಯ ಸಲಹೆ | ಹಸುಗಳನ್ನು ಕಾಲುಬಾಯಿ ರೋಗ, ಚಪ್ಪೆ ರೋಗ, ಗಳು ಬೇನೆ ರೋಗಗಳ ವಿರುದ್ಧ ಮುಂಚೆ ಲಸಿಕೆಗಳನ್ನು ಹಾಕಿಸದಿದ್ದರೆ ಹಾಕಿಸುವುದು ಉತ್ತಮ<br>ಹಸುಗಳ ಹಾಲನ್ನು ವೃದ್ಧಿಸಲು ಆಹಾರದ ಜೊತೆಗೆ 30-50ಗ್ರಾಂನಷ್ಟು ಖನಿಜ ಮಿಶ್ರಣವನ್ನು ಕೊಡುವುದು ಉತ್ತಮ<br>ಪರತಂತ್ರ ಜೀವಿಗಳು: ಈ ಜೀವಿಗಳಿಂದಾಗುವ ಹಾನಿಯನ್ನು ತಪ್ಪಿಸಲು ಕೊಟ್ಟಿಗೆಯನ್ನು ಸ್ವಚ್ಛವಾಗಿ ಇಡುವ್ವದು ಉತ್ತಮ. ಕೊಟ್ಟಿಗೆಯನಲ್ಲಿ ಬೇವು ಅಥವಾ ಲೆಮನ್ ಗ್ರಾಸ್ ಹುಲ್ಲಿನ ಎಲೆಗಳನ್ನು ನ್ಥೆತು ಹಾಕುವುದು ಇದರ ಪರಿಮಳದಿಂದ ಪರತಂತ್ರ ಜೀವಿಗಳಾದ ಸೊಳ್ಳೆ, ತಿಗಣೆ, ನೊಣಗಳು ದೂರ ಉಳಿಯುತ್ತವೆ ಅಥವಾ ಬೇವಿನ ಎಣ್ಣೆ ಅಥವಾ ನೀಲಗಿರಿ ಎಣ್ಣೆಯನ್ನು ಕೊಟ್ಟಿಗೆಗೆ ಸಿಂಪಡಿಸುವುದು ಉತ್ತಮ |
| ಮೀನು ಮರಿ ಉತ್ಪಾದನೆ | ---- | ---- | ಕರಾವಳಿ ಮೀನು ಕೃಷಿಕರು ಮಿನು ಕೊಳದ ಪೂರ್ವ ಸಿದ್ಧತೆ ಮಾಡಿಕೊಳ್ಳಲು ಸೂಕ್ತ ಸಮಯವಾಗಿದೆ.ಮೀನು ಮರಿ ಪಾಲನಾ ಕೊಳಗಳಲ್ಲಿ ಸುಣ್ಣವನ್ನು ಹಾಕುವ ಮೂಲಕ ರಸಸಾರವನ್ನು 7.5 ಇರುವಂತೆ ಸರಿದೂಗಿಸುವುದು. ಅನಂತರ ಹಟ್ಟಿ ಗೊಬ್ಬರವನ್ನು ಹಾಕಿ ನೈಸರ್ಗಿಕ ಮೀನಿನ ಆಹಾರ ಉತ್ಪಾದನೆಯಿಂದ ಕೊಳದ ನೀರು ತಿಳಿ ಹಸಿರಿನಿಂದ ಕಂದು ಬಣ್ಣಕ್ಕೆ ತಿರುಗುವ ವೇಳೆಗೆ ಸಿಹಿ ನೀರು ಮೀನು ಮರಿಗಳನ್ನು ದಾಸ್ತಾನು ಮಾಡಬಹುದು. ಈ ಮರಿಗಳು ಜೂನ್ ಮತ್ತು ಜುಲೈ ತಿಂಗಳಲ್ಲಿ ಅಧಿಕೃತ ಸರಬರಾಜು ಮಾಡುವವರಲ್ಲಿ ಮಾರಾಟಕ್ಕೆ ಲಭ್ಯವಿರುತ್ತದೆ. |

(ಈ ಮೇಲಿನ ಬೆಳೆ ಸಲಹೆಯು ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ಹವಾಮಾನ ಮುನ್ಸೂಚನೆಯ ಆಧಾರವಾಗಿದೆ)

ಶ್ರೀ. ಪ್ರವೀಣ್ ಕೆ.ಎಮ್,
ತಾಂತ್ರಿಕ ಅಧಿಕಾರಿಗಳು,
ಜಿ.ಕೆ.ಎಮ್.ಎಸ್-ವಿಭಾಗ,
ವ.ಕೃ.ತೋ.ಸಂ.ಕೇ-ಬ್ರಹ್ಮಾವರ.

ಡಾ. ಎನ್. ಇ. ನವೀನ್ ,
ನೊಡಲ್ ಅಧಿಕಾರಿಗಳು,
ಜಿ.ಕೆ.ಎಮ್.ಎಸ್-ವಿಭಾಗ,
ವ.ಕೃ.ತೋ.ಸಂ.ಕೇ-ಬ್ರಹ್ಮಾವರ.